ಇದಕ್ಕೆ ಪುಟಗೊಟ್ಟಂತೆ 'ಶ್ರದ್ಧೆ' ಎನ್ನುವ ಗುಣವನ್ನೂ ಬೆಳೆಸಿಕೊಳ್ಳಬೇಕು. ಶ್ರದ್ಧೆ ಎಂದರೆ, ನಂಬಿಕೆ, ವಿಶ್ವಾಸ ಮತ್ತು ಗೌರವಗಳು ಮಡುಗಟ್ಟಿ ನಿಂತ ಮಾನಸಿಕ ಸ್ಥಿತಿ. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ, 'ನಮಗೆ ಬೇಕಾಗಿರುವುದು ಶ್ರದ್ಧೆ. ದುರದೃಷ್ಟವಶಾತ್ ಭರತಖಂಡದಿಂದ ಇದು ಮುಕ್ಕಾಲುಪಾಲು ಕಣ್ಮರೆಯಾಗಿದೆ. ಆದ್ದರಿಂದಲೇ ನಾವು ಇಂತಹ ಅಧೋಗತಿಗೆ ಬಂದಿರುವುದು. ಒಬ್ಬನಿಗೂ ಮತ್ತೊಬ್ಬನಿಗೂ ವ್ಯತ್ಯಾಸವೆಂದರೆ ಅವರಲ್ಲಿ ಇರುವ ಶ್ರದ್ಧೆಯ ತರತಮದಲ್ಲಿ; ಅನ್ಯಥಾ ಅಲ್ಲ. ಒಬ್ಬನನ್ನು ಉತ್ತಮ ವ್ಯಕ್ತಿಯನ್ನಾಗಿ ಮಾಡಿರುವುದು ಶ್ರದ್ಧೆ; ಮತ್ತೊಬ್ಬನನ್ನು ದುರ್ಬಲನನ್ನಾಗಿ, ಅಧಮನನ್ನಾಗಿ ಮಾಡಿರುವುದು ಅಶ್ರದ್ಧೆ' (ಕೃ. ಶ್ರೀ. ೩:೧೯೦).

ಶ್ರದ್ಧೆ ಎಂಬ ಪದಕ್ಕೆ **'ಆಸ್ತಿಕ್ಯ ಬುದ್ಧಿಃ'** – 'ಇದೆ, ಇದೆ' ಎಂದು ಒಪ್ಪಿಕೊಳ್ಳುವ ಮನಃಸ್ಥಿತಿ ಎಂದು ಶ್ರೀಶಂಕರಾಚಾರ್ಯರು ವ್ಯಾಖ್ಯಾನ ಮಾಡುತ್ತಾರೆ. ಸ್ವಾಮಿ ತಪಸ್ಯಾನಂದಜಿ ಅವರು, 'ಶ್ರದ್ಧೆಯೆಂದರೆ ವಿದ್ಯೆಯೆಂಬ ಬೆಳೆಯು ಹುಲುಸಾಗಿ ಬೆಳೆಯುವುದಕ್ಕಾಗಿ ಪೂರ್ವಭಾವಿಯಾಗಿ ಇರಬೇಕಾದ ಫಲವತ್ತಾದ ಮನೋಭೂಮಿಕೆ' ಎಂದು ಅಭಿಪ್ರಾಯಪಡುತ್ತಾರೆ. ಸ್ವಾಮಿ ರಂಗನಾಥಾನಂದಜಿ ಅವರು, "ಶ್ರದ್ಧೆಯೆಂದರೆ, ಎಲ್ಲ ಸಕಾರಾತ್ಮಕ ಭಾವನೆಗಳ ಒಟ್ಟು ಮೊತ್ತ. ಅದು ಒಬ್ಬನಲ್ಲಿ 'ನಾನು ಮಾಡಬಲ್ಲೆ' ಎಂಬ ಆತ್ಮವಿಶ್ವಾಸವನ್ನು ಮೂಡಿಸುತ್ತದೆ" ಎಂದು ಹೇಳುತ್ತಾರೆ. ಇವೆಲ್ಲವೂ ಶ್ರದ್ಧೆಯ ವ್ಯಾಪಕಾರ್ಥವನ್ನು ನಮಗೆ ಪರಿಚಯ ಮಾಡಿಕೊಡುತ್ತವೆ.

## ಮೂರನೆಯ ಪರಿಕಲ್ಪನೆ

> **ನನ್ನ ವಿದ್ಯಾಭ್ಯಾಸದ ಆದರ್ಶವೆಂದರೆ ಗುರುಗೃಹವಾಸ. ಗುರುವಿನ**
> **ಪ್ರತ್ಯಕ್ಷ ಜೀವನದ ಮೇಲ್ಪಂಕ್ತಿ ಇಲ್ಲದೆ ನಿಜವಾದ ವಿದ್ಯಾಭ್ಯಾಸವಿಲ್ಲ.**
> **ನಮ್ಮ ವಿಶ್ವವಿದ್ಯಾನಿಲಯಗಳನ್ನೇ ತೆಗೆದುಕೊಳ್ಳಿ. ಐವತ್ತು**
> **ವರ್ಷಗಳಿಂದ ಅವುಗಳೇನು ಮಾಡಿರುವುವು?**
> **ಸ್ವತಂತ್ರವಾಗಿ ಆಲೋಚಿಸಬಲ್ಲ ಒಬ್ಬನೇ ಒಬ್ಬ ವ್ಯಕ್ತಿಯನ್ನೂ**
> **ಅವು ಸೃಷ್ಟಿಸಿಲ್ಲ.**

(ಕೃ. ಶ್ರೀ. ೭ :೪೪೬)

ಮೇಲಿನ ವಾಕ್ಯವು ಗುರುಕುಲವಾಸದ ಮಹತ್ತ್ವವನ್ನು ಎತ್ತಿತೋರಿಸುತ್ತದೆ. ಸ್ವಾಮಿ ವಿವೇಕಾನಂದರು ವ್ಯಕ್ತಿಯೊಬ್ಬನ ಜೀವನದಲ್ಲಿ, ಆದರ್ಶದ ಆವಶ್ಯಕತೆಯನ್ನು ಪ್ರಬಲವಾಗಿ ಪ್ರತಿಪಾದಿಸುತ್ತಾರೆ. ಈ ಆದರ್ಶವನ್ನು ಪ್ರತ್ಯಕ್ಷವಾಗಿ ಆಚರಣೆಗೆ ತರುತ್ತಿರುವ ಮತ್ತೊಬ್ಬ ಉದಾತ್ತ ವ್ಯಕ್ತಿಯ ಸಂಸರ್ಗವು ಅಂತಹ ಸಾಧಕ ವ್ಯಕ್ತಿಗೆ ಬೇಕೇ ಬೇಕು. ಗುರುವೇ ಇಲ್ಲಿ ಅಂತಹ ಆದರ್ಶ ಪುರುಷ. ಅವನು ವಿದ್ಯಾರ್ಥಿಗಳಿಗೆ, ಅವರು ಜೀವನ ನಡೆಸಬೇಕಾದ ಆದರ್ಶದ ಒಂದು ಮಾದರಿಯನ್ನು ತನ್ನ ನಡೆನುಡಿಗಳ ಮೂಲಕ ತೋರಿಸಿಕೊಡುತ್ತಾನೆ. ಇಂತಹ ಸೌಲಭ್ಯವು ದೊರೆತಾಗ ವಿದ್ಯಾರ್ಥಿಯು ತಾನೇ ಗುರಿಗಳನ್ನು ಗೊತ್ತುಮಾಡಿಕೊಳ್ಳಲು, ಅವುಗಳಿಗೆ ಶ್ರಮಿಸುವ ವಿಧಾನಗಳನ್ನು ಕಂಡುಕೊಳ್ಳಲು ಮತ್ತು ಅವುಗಳನ್ನು ತಲುಪಲು ಬೇಕಾದ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ಶ್ರಮಿಸುತ್ತಾನೆ. ಒಟ್ಟಿನಲ್ಲಿ ಸ್ವಂತ ಆಲೋಚನೆ ಮಾಡಲು ಕಲಿತುಕೊಳ್ಳುತ್ತಾನೆ. ಅಂತಹ ಸೌಲಭ್ಯ ಆಧುನಿಕ ಶೈಕ್ಷಣಿಕ ಸಂಸ್ಥೆಗಳಲ್ಲಿ ದೊರಕದು. ಆದ್ದರಿಂದ ಕೇವಲ ಮಾಹಿತಿಗಳನ್ನು ತನ್ನ ಮಿದುಳಿನಲ್ಲಿ ತುಂಬಿಕೊಳ್ಳಲು ಮಾತ್ರ ಕಲಿಯುವ ವಿದ್ಯಾರ್ಥಿಯು ಸ್ವತಂತ್ರವಾಗಿ ಚಿಂತಿಸುವ ಬಗೆಯನ್ನು ಅರಿಯಲಾರ. ಇದು ಈಗಿನ ವಿದ್ಯಾಭ್ಯಾಸ ಪದ್ಧತಿಯ ಮುಖ್ಯ ಲೋಪದೋಷಗಳಲ್ಲಿ ಒಂದು ಎಂಬುದೇ ಸ್ವಾಮಿ ವಿವೇಕಾನಂದರ ಅಭಿಪ್ರಾಯ.

## ನಾಲ್ಕನೆಯ ಪರಿಕಲ್ಪನೆ

> **ವಿದ್ಯಾಭ್ಯಾಸವೆಂದರೇನು? ಪುಸ್ತಕ ಪಾಂಡಿತ್ಯವೇ? ಅಲ್ಲ. ಹಲವು**
> **ವಿಧದ ಜ್ಞಾನಾರ್ಜನೆಯೇ? ಅದೂ ಅಲ್ಲ. ಯಾವ ತರಬೇತಿಯ**
> **ಮೂಲಕ ಇಚ್ಛಾಶಕ್ತಿಯ ಪ್ರವಾಹ ಮತ್ತು ಅಭಿವ್ಯಕ್ತಿಗಳು**
> **ನಿಯಂತ್ರಣಕ್ಕೆ ಒಳಗಾಗಿ ಫಲಕಾರಿಯಾಗುವವೋ ಅದೇ ಶಿಕ್ಷಣ.**

(ಕೃ. ಶ್ರೀ. ೫.೧೨೩)

ಸ್ವಾಮಿ ವಿವೇಕಾನಂದರ ಪ್ರಕಾರ ಮಾಹಿತಿಗಳ ಸಂಗ್ರಹವಷ್ಟೇ ಶಿಕ್ಷಣವಾಗಲಾರದು. ಇನ್ನೊಂದೆಡೆ ಅವರು ಹೀಗೆ ಹೇಳುತ್ತಾರೆ: "ವಿದ್ಯಾಭ್ಯಾಸವೆಂದರೆ ನಿಮ್ಮ ತಲೆಗೆ ತುಂಬಲ್ಪಟ್ಟ ಮಾಹಿತಿಗಳ ಮೊತ್ತವಲ್ಲ. ಅದು ಅಲ್ಲಿ ಜೀರ್ಣವಾಗದೆ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದಲ್ಲ."

ಪ್ರತಿಯೊಬ್ಬ ಮನುಷ್ಯನಿಗೂ ಇಚ್ಛಾಶಕ್ತಿ ಇರುತ್ತದೆ. ಅದನ್ನು ಅವನು ತಾನು ಮಾಡುವ ಹಲವಾರು ಕಾರ್ಯಗಳಲ್ಲಿ ಉಪಯೋಗಿಸುತ್ತಾನೆ. ಆದರೆ ಉನ್ನತ ಆದರ್ಶದ ಕಡೆಗೆ ನಮ್ಮ ಇಚ್ಛಾಶಕ್ತಿಯನ್ನು ಕೇಂದ್ರೀಕರಿಸಿ ಕಾರ್ಯತತ್ಪರರಾಗುವುದರಿಂದಲೇ ಬಾಳಿನಲ್ಲಿ ಸಾರ್ಥಕತೆ ಬರುತ್ತದೆ. ಅದಕ್ಕಾಗಿ ಇಚ್ಛಾಶಕ್ತಿಯನ್ನು ನಮ್ಮ ಸಂಪೂರ್ಣ ವಶಕ್ಕೆ ತೆಗೆದುಕೊಳ್ಳಬೇಕು ಮತ್ತು ಅದನ್ನು ನಮ್ಮ ಧ್ಯೇಯಸಾಧನೆಗೆ ಸಹಕಾರಿಯಾಗುವ ವಿಧಾನಗಳು ಮತ್ತು ಮಾರ್ಗಗಳಲ್ಲಿ ಹರಿಸಬೇಕು. ಆಗ ಮಾತ್ರ ಮಹಾನ್ ಕಾರ್ಯಗಳೆಂಬ ಫಲಗಳನ್ನು ಅದರಿಂದ ಪಡೆಯಬಹುದು. ಇದನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದೇ ಶಿಕ್ಷಣ. ಇಲ್ಲಿ ಶಿಕ್ಷಣಕ್ಕೆ ತರಬೇತಿಯ ಆಯಾಮವನ್ನು ಸ್ವಾಮೀಜಿ ಕೊಡುತ್ತಾರೆ ಎನ್ನುವುದನ್ನು ಗಮನಿಸಬೇಕು.

## ಸ್ವಾಮಿ ವಿವೇಕಾನಂದರ ಶೈಕ್ಷಣಿಕ ತತ್ತ್ವ

ವಿವೇಕಾನಂದರು ಧರ್ಮ ಮತ್ತು ಶಿಕ್ಷಣಗಳ ಬಗ್ಗೆ ನೀಡಿರುವ ಎರಡು ವ್ಯಾಖ್ಯಾನಗಳನ್ನು ಜೊತೆಜೊತೆಯಾಗಿಟ್ಟುಕೊಂಡು ಪರೀಕ್ಷಿಸೋಣ: "ಧರ್ಮವೆಂದರೆ ಮಾನವನಲ್ಲಿ ಈಗಾಗಲೇ ಹುದುಗಿರುವ ದಿವ್ಯತೆಯ ಅಭಿವ್ಯಕ್ತಿ. ಶಿಕ್ಷಣವೆಂದರೆ ಮಾನವನಲ್ಲಿ ಈಗಾಗಲೇ ಹುದುಗಿರುವ ಪರಿಪೂರ್ಣತೆಯ ಅಭಿವ್ಯಕ್ತಿ." ಇಲ್ಲಿ 'ಧರ್ಮ' ಬೇರೆ ಅಲ್ಲ, 'ಶಿಕ್ಷಣ' ಬೇರೆ ಅಲ್ಲ. ಶಿಕ್ಷಣದ ಮೂಲಕ ಧರ್ಮದ ಸಿದ್ಧಿಯಾಗುವುದು. ಹಾಗೆಯೇ 'ಪರಿಪೂರ್ಣತೆ' ಬೇರೆ ಅಲ್ಲ, 'ದಿವ್ಯತೆ' ಬೇರೆ ಅಲ್ಲ. ಪರಿಪೂರ್ಣತೆಯ ವಿಕಸನವೇ ದಿವ್ಯತೆಯ ಅಭಿವ್ಯಕ್ತಿ ಎನ್ನಿಸಿಕೊಳ್ಳುವುದು. ಇದರಿಂದ ಚೈತನ್ಯದ ವಿಕಾಸವುಂಟಾಗಿ, ಅಪಾರ ಶಕ್ತಿ ಹೊರಕ್ಕೆ ಬರುವುದು. ಅದನ್ನು ಹೊರಪ್ರಪಂಚದೆಡೆಗೆ ಹರಿಸಿದಾಗ ಭೌತಿಕ ವಿಜ್ಞಾನವು ಬೆಳೆಯುತ್ತದೆ, ಅಂತರಂಗದೆಡೆ ಹರಿಸಿದಾಗ ಆತ್ಮಸಾಕ್ಷಾತ್ಕಾರವಾಗುತ್ತದೆ ಎಂದು ಸ್ವಾಮೀಜಿ ಹೇಳುತ್ತಾರೆ. ಹೀಗಾಗಿ ಧರ್ಮವೇ

ಶಿಕ್ಷಣದ ಆಧಾರವಾಗಿರಬೇಕೇ ಹೊರತು ಬರಿಯ ಲೌಕಿಕ ಮಹತ್ವಾಕಾಂಕ್ಷೆಯಲ್ಲ.

ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣ ನಕಾರಾತ್ಮಕ ಕ್ರಿಯೆಯೇ ಹೊರತು ಸಕಾರಾತ್ಮಕವಲ್ಲ. ಶಿಕ್ಷಣವೆಂದರೆ ಅಜ್ಞಾನದ ಆವರಣವನ್ನು ತೆಗೆಯುವುದು ಮಾತ್ರ, ಮಗುವು ತನಗೆ ತಾನೇ ಕಲಿತುಕೊಳ್ಳುತ್ತದೆ. ಅವರ ಪ್ರಕಾರ ನೈಜ ಶಿಕ್ಷಣವೇ ಬಾಳಿನ ಗುರಿ. ಶಿಕ್ಷಣದಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ಎಂಬ ಎರಡು ವಿಭಾಗಗಳನ್ನು ಮಾಡುವುದಾದರೆ, ಅವೆರಡೂ ಕಲೆತ ಸಮಗ್ರ ಶಿಕ್ಷಣವೇ ಸ್ವಾಮೀಜಿಯವರ ಆದರ್ಶದ ಶಿಕ್ಷಣ.

## ಶೈಕ್ಷಣಿಕ ಆಂದೋಲನದ ಬಗ್ಗೆ ಸ್ವಾಮಿ ವಿವೇಕಾನಂದರ ಚಿಂತನೆ

ಉತ್ತಮ ವರ್ಗದವರ ಶೋಷಣೆಯ ಫಲವಾಗಿ ನೂರಾರು ವರ್ಷಗಳಿಂದ ದೀನದಲಿತರು ಕೆಳಮಟ್ಟದಲ್ಲಿದ್ದಾರೆ. ಅವರ ಉನ್ನತಿಗಾಗಿ ಶಿಕ್ಷಣವೊಂದೇ ಉಪಾಯ. ಸ್ವಾಮೀಜಿ ಹೇಳುತ್ತಾರೆ, "ವಿದ್ಯೆ, ವಿದ್ಯೆ, ವಿದ್ಯೆಯೊಂದೇ. ಅನೇಕ ಐರೋಪ್ಯ ದೇಶಗಳಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅತಿ ದೀನರಿಗೂ ಅಲ್ಲಿ ಲಭಿಸಿರುವ ಸೌಕರ್ಯ ಮತ್ತು ವಿದ್ಯೆ – ಇವುಗಳನ್ನು ಕಂಡಾಗ, ನನ್ನ ದೇಶದ ಬಡಜನರ ಸ್ಥಿತಿಯು ನನಗೆ ನೆನಪಾಗಿ, ನಾನು ಕಂಬನಿಯನ್ನು ಸುರಿಸುತ್ತಿದ್ದೆ. ಈ ವ್ಯತ್ಯಾಸ ಹೇಗೆ ಆಯಿತು ಎಂದು ಚಿಂತಿಸಿದಾಗ ನನಗೆ ಸಿಕ್ಕಿದ ಉತ್ತರವೇ, ವಿದ್ಯೆ" (ಕೃ. ಶ್ರೇ. ೪.೪೯೦).

ಕೇವಲ ಶಿಕ್ಷಣದಿಂದ ಮಾತ್ರವೇ ದೀನದಲಿತರ ಉದ್ಧಾರ ಮತ್ತು ಮಹಿಳೆಯರ ಪುರೋಭಿವೃದ್ಧಿ ಸಾಧ್ಯ. ಇದರ ಮೂಲಕ ಮಾತ್ರವೇ ಸಾಮಾಜಿಕ ಸುಧಾರಣೆಯೂ ಸಾಧ್ಯ.

> **ಹೀನಸ್ಥಿತಿಯಲ್ಲಿರುವ ನಮ್ಮ ಬಡವರಿಗೆ ನಾವು ಮಾಡಬೇಕಾದ ಮುಖ್ಯ ಕರ್ತವ್ಯವೇ, ಅವರಿಗೆ ವಿದ್ಯೆಯನ್ನು ಕೊಟ್ಟು ಅವರನ್ನು ಪುನಃ ಮನುಷ್ಯರನ್ನಾಗಿ ಮಾಡುವುದು... ಅವರಿಗೆ ಉನ್ನತ ವಿಚಾರಗಳನ್ನು ಕೊಡಿ. ಅವರಿಗೆ ಬೇಕಾಗಿರುವ ಸಹಾಯ ಅದೊಂದೇ. ಅನಂತರ ಇವುಗಳ ಪರಿಣಾಮವಾಗಿ ಉಳಿದುದೆಲ್ಲ ಬಂದೇ ಬರುವುದು. ರಾಸಾಯನಿಕ ವಸ್ತುಗಳನ್ನು ಮಿಶ್ರ ಮಾಡುವುದಷ್ಟೇ ನಮ್ಮ ಕೆಲಸ. ಹರಳುಗಟ್ಟುವಿಕೆ ಪ್ರಕೃತಿನಿಯಮದಂತಾಗುತ್ತದೆ... ಬೆಟ್ಟ ಮಹಮ್ಮದನ ಸಮೀಪಕ್ಕೆ ಬರದೇ ಇದ್ದರೆ ಮಹಮ್ಮದನೇ ಬೆಟ್ಟದ ಸಮೀಪಕ್ಕೆ ಬರಬೇಕು. ಬಡ ಹುಡುಗನು ವಿದ್ಯಾಭ್ಯಾಸಂಗಕ್ಕೆ ಬರಲಾಗದಿದ್ದರೆ ವಿದ್ಯೆಯೇ ಅವನ ಬಳಿಗೆ ಹೋಗಬೇಕು.**
>
> – **ಸ್ವಾಮಿ ವಿವೇಕಾನಂದ** (ಕೃ. ಶ್ರೇ. ೪. ೧೪೭–೪೮)

ಶಿಕ್ಷಣದ ಮೂಲಕ ಭೌತಿಕ ಪ್ರಗತಿ ಮತ್ತು ಆಧ್ಯಾತ್ಮಿಕ ಪ್ರಗತಿ – ಎರಡೂ ಉಂಟಾಗುತ್ತದೆ. ಆದ್ದರಿಂದ ಶಿಕ್ಷಣದ ಸಾರ್ವತ್ರೀಕರಣದ ಮೂಲಕ ಕೆಳಗಿನ ವರ್ಗದವರ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಸ್ತರಗಳನ್ನು ಮೇಲೇರಿಸಬೇಕು. ಇದೇ ಸ್ವಾಮಿ ವಿವೇಕಾನಂದರ ಆಶಯವಾಗಿತ್ತು.

## ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ ಪಾತ್ರ

೧೯೬೪–೬೬ರ ಅವಧಿಯಲ್ಲಿ ಭಾರತ ಸರ್ಕಾರವು ಶಿಕ್ಷಣ ಆಯೋಗವೊಂದನ್ನು ನಿಯುಕ್ತಿ ಮಾಡಿತ್ತು. ಅದು ಸಲ್ಲಿಸಿದ ವರದಿಯ ಮೊದಲ ವಾಕ್ಯಗಳೇ ಇವು: "ಭಾರತದ ಭವಿತವ್ಯ ಈಗ ರೂಪುಗೊಳ್ಳುತ್ತಿರುವುದು ಶಾಲಾಕೊಠಡಿಗಳಲ್ಲಿ. ಇದು ಬರೀ ಶಬ್ದಜಾಲವಲ್ಲ. ಶಾಲೆಯ ಅತ್ಯಂತ ಮುಖ್ಯ ಅಂಶವೆಂದರೆ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಮೇಲೂ, ತನ್ನ ವಿಷಯದ ಮೇಲೂ ತೋರುವ ಪ್ರೀತಿ. ಒಳ್ಳೆಯ ಶಿಕ್ಷಕರ ಮೂಲಕ ಉತ್ತಮ ಶಾಲೆ ಮತ್ತು ಆ ಮೂಲಕ ಉತ್ತಮ ರಾಷ್ಟ್ರ ನಿರ್ಮಾಣವಾಗಬಲ್ಲುದು." ಬೃಹದಾರಣ್ಯಕ ಉಪನಿಷತ್ತಿನಲ್ಲಿ ಗುರುವಿನ ಅರ್ಹತೆಯನ್ನು ಹೀಗೆ ವಿವರಿಸಲಾಗಿದೆ: **ಶ್ರೋತ್ರಿಯೋ ಅವೃಜಿನಃ ಅಕಾಮಹತಃ ಯೋ ಬ್ರಹ್ಮವಿತ್ತಮಃ** 'ಶ್ರೋತ್ರಿಯಃ' ಎಂದರೆ ಶ್ರುತಿಯ ಸಾರವನ್ನು ತಿಳಿದವನು. 'ಅವೃಜಿನಃ' ಎಂದರೆ ಪಾಪರಹಿತನು. 'ಅಕಾಮಹತಃ' ಎಂದರೆ ಯಾವುದೇ ಸ್ವಾರ್ಥ ಬಯಕೆಗಳಿಂದ ಮುಕ್ತನಾದವನು. ಸ್ವಾಮಿ ವಿವೇಕಾನಂದರ ವಾಣಿಯ ಮೂಲಕ ಇದೇ ಗುಣಗಳಿಗೆ ಆಧುನಿಕ ವಿವರಣೆಯನ್ನು ನೀಡಬಹುದು:

**ಶ್ರೋತ್ರಿಯಃ** : ಶಿಕ್ಷಕನ ಮಾತುಗಳಲ್ಲ, ಅದಕ್ಕೆ ಬದಲಾಗಿ ಅದರ ಹಿಂದಿನ ಶಕ್ತಿ ಮುಖ್ಯ. ನಿಜವಾದ ಶಿಕ್ಷಕ ತಾನು ತಿಳಿಸಿಕೊಡುವ ವಿಷಯದ ಮರ್ಮವನ್ನು ಅರಿತಿರುತ್ತಾನೆ.

**ಅವೃಜಿನಃ**: ಶಿಕ್ಷಕ ವಿದ್ಯಾರ್ಥಿಗಳಿಗೆ ಸಂವಹನ ಮಾಡುವುದು ಹೃದಯ ಮತ್ತು ಆತ್ಮದ ಪವಿತ್ರತೆಯನ್ನು. ಅವನ ಮಾತಿಗೆ ಮೌಲ್ಯವಿರಬೇಕಾದರೆ ಅವನು ಸ್ವತಃ ಸಂಪೂರ್ಣವಾಗಿ ಪವಿತ್ರನಾಗಿರಬೇಕು. ಬೋಧನೆಯಲ್ಲಿ ಒಂದು ಜೀವ ಇನ್ನೊಂದು ಜೀವದ ಜೊತೆಗೆ ನೇರವಾಗಿ ಮಾತನಾಡುತ್ತದೆ; ಒಂದು ಜೀವ ಇನ್ನೊಂದಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುತ್ತದೆ. ತನ್ನ ವ್ಯಕ್ತಿತ್ವದ ಒಂದು ಭಾಗವನ್ನೇ ವಿದ್ಯಾರ್ಥಿಗಳಿಗೆ ಶಿಕ್ಷಕನಾದವನು ಆ ಸಮಯದಲ್ಲಿ ಸಂವಹನ ಮಾಡುತ್ತಿರುತ್ತಾನೆ. ಆದ್ದರಿಂದ ಶಿಕ್ಷಕನು ಪರಿಶುದ್ಧನಾಗಿರಬೇಕು.


**ಅಕಾಮಹತಃ**: ಬೋಧನೆಯ ಹಿಂದಿನ ಉದ್ದೇಶ ಉದಾತ್ತವಾಗಿರಬೇಕು, ನಿಸ್ವಾರ್ಥವಾಗಿರಬೇಕು. ಹಣ, ಹೆಸರು, ಕೀರ್ತಿಗಳಿಗಾಗಿ ಬೋಧಿಸಬಾರದು. ಪರಿಶುದ್ಧ ಪ್ರೇಮವೊಂದೇ ಬೋಧನೆಯ ಉದ್ದೇಶವಾಗಿರಬೇಕು. ಪ್ರೇಮವೊಂದೇ ಬೋಧನೆಯ ಮಾಧ್ಯಮವಾಗಬೇಕು.

## ಉಪಸಂಹಾರ

ಹೀಗೆ ಸ್ವಾಮಿ ವಿವೇಕಾನಂದರ ಶೈಕ್ಷಣಿಕ ವಿಚಾರಗಳು ಆಧ್ಯಾತ್ಮಿಕ ದೃಷ್ಟಿಕೋನದಿಂದ ಕೂಡಿರುವಂಥವು. ಅವರ ದೊಡ್ಡ ಕೊಡುಗೆ ಎಂದರೆ ಶಿಕ್ಷಣಕ್ಕೆ ಆಧ್ಯಾತ್ಮಿಕ ಆಯಾಮವನ್ನು ಕೊಟ್ಟದ್ದು. ಅವರ ಪ್ರಕಾರ ಶಿಕ್ಷಣ ಕೇವಲ ಶಿಕ್ಷಣವಾಗಿ ಉಳಿಯುವುದಿಲ್ಲ, ಧರ್ಮವಾಗುತ್ತದೆ, ಇನ್ನೂ ಹೆಚ್ಚು ಅರ್ಥ ಪಡೆದುಕೊಂಡು ಅಧ್ಯಾತ್ಮವಾಗುತ್ತದೆ; ಪರಿಪೂರ್ಣತೆಯನ್ನು ಹುಡುಕುತ್ತ ಹೋಗಿ ದಿವ್ಯತೆಯನ್ನು ಕಂಡುಕೊಳ್ಳುತ್ತದೆ; ಕಡೆಗೆ ಆ ದಿವ್ಯಸ್ವರೂಪದೊಂದಿಗೆ ತಾದಾತ್ಮ್ಯವನ್ನು ಪಡೆದು ನಮ್ಮ ಬದುಕನ್ನು ಸಾರ್ಥಕವನ್ನಾಗಿ ಮಾಡುತ್ತದೆ. ★

# ಕುವೆಂಪು ಅವರ ಶೈಕ್ಷಣಿಕ ವಿಚಾರಗಳು

ಡಾ. ಸಿ.ಪಿ. ಕೃಷ್ಣಕುಮಾರ್



**ಕುವೆಂಪು ಅವರು ರಾಮಕೃಷ್ಣ–ವಿವೇಕಾನಂದ ಭಾವಧಾರೆಯಿಂದ ಪ್ರಭಾವಿತರಾಗಿದ್ದರು. ಶ್ರೇಷ್ಠ ಬೋಧಕರು, ಶಿಕ್ಷಣತಜ್ಞರು ಮತ್ತು ಶೈಕ್ಷಣಿಕ ಆಡಳಿತಾಧಿಕಾರಿಗಳು ಕೂಡ ಆಗಿದ್ದ ಅವರ ಶೈಕ್ಷಣಿಕ ಚಿಂತನೆಗಳು ಅವರ ಅಪಾರ ಅನುಭವದ ಮೂಸೆಯಿಂದ ಬಂದವುಗಳಾಗಿವೆ; ಹೀಗಾಗಿ ಅತ್ಯಂತ ಮೌಲಿಕ ಹಾಗೂ ಪ್ರಾಯೋಗಿಕವಾಗಿವೆ. ಇವುಗಳ ಸೋದಾಹರಣ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ಕನ್ನಡದ ಹೆಸರಾಂತ ಬರಹಗಾರರು.**

**ಕು**ವೆಂಪು ಅವರು ಕವಿವರ ಮತ್ತು ದ್ರಷ್ಟಾರ ಹೇಗೊ ಹಾಗೆ, ಶ್ರೇಷ್ಠ ಶಿಕ್ಷಣ ತಜ್ಞ ಕೂಡ. ಅವರ ಶೈಕ್ಷಣಿಕ ವಿಚಾರಗಳು ದರ್ಶನದೀಪ್ತವಾಗಿರುವಂತೆಯೆ ವಿಜ್ಞಾನಸಮ್ಮತವೂ ಆಗಿವೆ. ಶ್ರೀಸಾಮಾನ್ಯನನ್ನು ಲಕ್ಷ್ಯವಾಗಿರಿಸಿಕೊಂಡ ಕುವೆಂಪು ಅವರ ಆಲೋಚನೆಗಳಲ್ಲಿ ಆದರ್ಶನಿಷ್ಠೆಯಿರುವಂತೆ ವ್ಯವಹಾರ ವಿವೇಕವೂ ಮನೆ ಮಾಡಿದೆ. ಅವರ ವ್ಯಕ್ತಿತ್ವ, ಸಾಹಿತ್ಯಗಳ ರತ್ನತ್ರಯವಾದ **ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿಗಳು** ಅವರ ಶಿಕ್ಷಣಸಂಬಂಧವಾದ ದೃಷ್ಟಿ, ಧೋರಣೆಗಳಲ್ಲೂ ಅಭಿವ್ಯಕ್ತವಾಗಿವೆ. ಶಿಕ್ಷಣದ ಮಾಧ್ಯಮವನ್ನು ಕುರಿತು ಕುವೆಂಪು ಅತ್ಯಂತ ಬೋಧಪ್ರದವಾಗಿ, ಉಪಯುಕ್ತವಾಗಿ ಜಿಜ್ಞಾಸೆ ನಡೆಸಿದ್ದಾರೆ. ಹಾಗೆ ಮಾಡುವಾಗ ಭಾರತೀಯ ಸಮಾಜ, ಪರಿಸರಗಳನ್ನು ಅವರು ಮರೆತಿಲ್ಲ, ವರ್ತಮಾನದ ಸಮಸ್ಯೆಗಳಿಗೆ ಕಣ್ಣುಮುಚ್ಚಿಕೊಂಡಿಲ್ಲ ಎಂಬುದು ಮಹತ್ವದ ಸಂಗತಿ. ಅವರ ನಿಲುವುಗಳಲ್ಲಿ ಅತಿರೇಕವಿಲ್ಲ, ಸಮತೂಕವಿದೆ; ಗುರುತ್ವವಿದೆ; ಗುರಿಯನ್ನು ಸುಸ್ಪಷ್ಟವಾಗಿ ತೋರುವ ಧೀರ ಧೀಮಂತ ಭಂಗಿಯಿದೆ.

### ವಿದ್ಯೆ ಎಂದರೇನು?

ವಿದ್ಯೆ ಎಂದರೇನು ಎಂಬುದು ಮೂಲಭೂತ ಪ್ರಶ್ನೆ. ಅದಕ್ಕೆ ಕುವೆಂಪು ಅವರ ಸೂತ್ರಸಮಾನವಾದ ಉತ್ತರ: "ವಿದ್ಯೆ ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ದೇವತ್ವಕ್ಕೆ ಎತ್ತುವ ಒಂದು ಸಾಧನ ಮತ್ತು ವಿಧಾನ." ವಿದ್ಯೆ ಅಥವಾ ಶಿಕ್ಷಣ ಎಂಬುದು ಬರಿಯ ಸಾಕ್ಷರತೆಯಲ್ಲ; ಕೇವಲ ಹೊಟ್ಟೆಪಾಡಿನ ಪರಿಹಾರವಲ್ಲ; ಶಾಲೆಯ ಕೊಠಡಿಗೆ ಸೀಮಿತವಾದುದೂ ಅಲ್ಲ. ಕುವೆಂಪು ಅವರ ಶಿಕ್ಷಣದ ಪರಿಕಲ್ಪನೆ ವ್ಯಾಪಕ ಮತ್ತು ಉದಾತ್ತವಾದದ್ದು; ಆದರೆ ಅಮೂರ್ತ ಅಥವಾ ಅಸಾಧ್ಯವಾದುದಲ್ಲ. ಅವರ ದೃಷ್ಟಿಗೆ ಅವರೇ ದೃಷ್ಟಾಂತವೂ ಆಗಿದ್ದಾರೆ!

ಇನ್ನೊಂದೆಡೆ ಕುವೆಂಪು ಹೇಳುತ್ತಾರೆ: "ಸಂಸ್ಕೃತಿಯ ಅಸ್ತಿತ್ವಕ್ಕೂ ಅದರ ವಿಕಾಸಕ್ಕೂ ವಿದ್ಯೆಯೇ ಮೂಲ ಮತ್ತು ಅನಿವಾರ್ಯವಾದ ಸಾಧನೆ." ವ್ಯಕ್ತಿತ್ವದ ಸರ್ವತೋಮುಖ ಅಭಿವೃದ್ಧಿ ಹಾಗೂ ಬಹುಸ್ತರ ಬೆಳವಣಿಗೆ ಅತ್ಯಗತ್ಯವೆಂದು ಒತ್ತಿ ಹೇಳುವ ಕುವೆಂಪು, ತನ್ಮೂಲಕ ಶಿಕ್ಷಣದ ಅನಿವಾರ್ಯತೆಯನ್ನು ಹೀಗೆ ಸ್ಥಾಪಿಸುತ್ತಾರೆ: "ನಮ್ಮ ಜೀವನ ಬಹಿರ್ಮುಖವಾಗಿ ಕರ್ಮಮಯವಾಗಿ ಪರಿಪೂರ್ಣವಾಗಿ ಮುಂದುವರಿಯಬೇಕಾದರೆ ಅನ್ನಮಯ ಪ್ರಾಣಮಯ ಕೋಶಗಳಿಂದ ಮೊದಲಾಗಿ ಮನೋಮಯ ವಿಜ್ಞಾನಮಯ ಕೋಶಗಳವರೆಗಿನ ಎಲ್ಲ ಸಾಧನೆಯೂ ಅತ್ಯವಶ್ಯ." ಶಿಕ್ಷಣದ ಧ್ಯೇಯೋದ್ದೇಶಗಳು ಎರಡು ಎಂದು ಪ್ರತಿಪಾದಿಸುತ್ತಾರೆ, ಕುವೆಂಪು: ಒಂದು ಲೌಕಿಕ, ಇನ್ನೊಂದು ಆಧ್ಯಾತ್ಮಿಕ. "ನಮ್ಮ ಹೊಟ್ಟೆ ಬಟ್ಟೆಗಳಿಗೆ ಸಂಪಾದನೆ ಮಾಡಿಕೊಂಡು ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬೇಕೆಂಬ ಲೌಕಿಕೋದ್ದೇಶವೇ ಬಹುಜನರ ಆಶಯ. ಇದು ನ್ಯಾಯವೇ. ಹೊಟ್ಟೆಗೆ ಇಲ್ಲದವನು ಆತ್ಮವನ್ನೇನು ಸಾಧಿಸಿಯಾನು? ಆದ್ದರಿಂದ ಹೊಟ್ಟೆಬಟ್ಟೆಗೆ ಬೇಕು. ಆದರೆ ಅಷ್ಟೇ ಸಾಲದು. ಅನ್ನ ಬಟ್ಟೆಗಳನ್ನು ಸಂಪಾದಿಸುವುದು ಮಾತ್ರವೇ ವಿದ್ಯೆಯ ಗುರಿಯಲ್ಲ. ನಮ್ಮ ನಾಗರಿಕತೆ ಬೆಳೆದಂತೆ ನಮ್ಮ ಆಧ್ಯಾತ್ಮಿಕತೆ ಅಥವಾ ಆತ್ಮಶ್ರೀಯೂ ಬೆಳೆಯಬೇಕು. ನಮ್ಮವರು ವಿದ್ಯೆಯನ್ನು ಕುರಿತು, **ಸಾ ವಿದ್ಯಾ ಯಾ ವಿಮುಕ್ತಯೇ** ಎಂದು ಹೇಳಿದರು. ನಮ್ಮನ್ನು ಮುಕ್ತರನ್ನಾಗಿ ಮಾಡತಕ್ಕಂತಹುದು ಯಾವುದೋ ಅದೇ ವಿದ್ಯೆ. ಲೌಕಿಕ ವಿದ್ಯೆ ನಮ್ಮನ್ನು ಲೌಕಿಕ ದಾಹದಿಂದ ಮುಕ್ತರನ್ನಾಗಿ ಮಾಡುತ್ತದೆ. ಆಧ್ಯಾತ್ಮಿಕ ವಿದ್ಯೆ ನಮ್ಮ ಆತ್ಮತೃಷೆಯನ್ನು ಹಿಂಗಿಸುತ್ತದೆ. ಹೀಗೆ ವಿಜ್ಞಾನ, ಕಲೆ ಎರಡೂ ನಮಗೆ ಬೇಕು." ಮತ್ತೆ ಕುವೆಂಪು ಹೇಳುತ್ತಾರೆ: "ಅಭ್ಯುದಯ